# ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ, ಕೋಲಾರ ಜಿಲ್ಲೆ.

## ಮಾದರಿ ಪ್ರಶ್ನೆಪತ್ರಿಕೆ –01

**ವಿಷಯ : ಪ್ರಥಮ ಭಾಷೆ ಕನ್ನಡ**

**ತರಗತಿ : 10ನೇ ತರಗತಿ** **ಅಂಕಗಳು:–100**

**ಸಮಯ:–3.15**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಕ್ಷರಾದೊಂದಿಗೆ ಬರೆಯಿರಿ** **6x1=6**

1. ಒಂದು ಪೂರ್ಣ ಕ್ರಿಯ ಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ
   ಎ. ಸಾಮಾನ್ಯ ವಾಕ್ಯ, ಬಿ. ಸಂಯೋಜಿತ,
   ಸಿ. ಮಿಶ್ರ ವಾಕ್ಯ ಡಿ. ವಿಶೇಷ ವಾಕ್ಯ.
2. ತೃತೀಯ ವಿಭಕ್ತಿಯ ಕಾರಕಾರ್ಥವಿದು_____
   ಎ. ಕತ್ರಾರ್ಥ, ಬಿ. ಕಮಾರ್ಥ.
   ಸಿ. ಕರಣಾರ್ಥ, ಡಿ. ಸಂಬಂದ.
3. ಅತ್ಯಂತ ಪದವು ಈ ಸಂದಿಗೆ ಉದಾಹರಣೆಯಾಗಿದೆ?
   ಎ. ಆಗಮ, ಬಿ. ಆದೇಶ.
   ಸಿ. ಸವರ್ಣದೀರ್ಘ, ಡಿ. ಯಣ್.
4. ತದ್ದಿತಾಂತ ಭಾವನಾಮಕ್ಕೆ ಉದಾಹರಣೆಯಿದು
   ಎ. ಬಳೆಗಾರ, ಬಿ. ನಿನಗಾಗಿ,
   ಸಿ. ಸಿರಿತನ, ಡಿ. ಸಿರಿವಂತ
5. ಕ್ರಿಯಾರ್ಥ ಅವ್ಯಯಕ್ಕೆ ಉದಾಹಣೆಯಿದು
   ಎ. ಸುಮ್ಮನೆ, ಬಿ. ಅಯ್ಯೋ.
   ಸಿ. ಅದುವೇ, ಡಿ. ಅಹುದು.
6. ವಿಧ್ಯರ್ಥಕ ಕ್ರಿಯಾ ರೂಪವಿದು
   ಎ. ಮಾಡಲಿ, ಬಿ. ಮಾಡನು,
   ಸಿ. ಮಾಡಿಯಾನು, ಡಿ. ಮಾಡೇವು.

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೇರಡು ಪದಗಳಿಗಿರುವ ಸಂಬಂಧದಂತೆ ಮೂರನೇಯ ಪದಕ್ಕೆ ಸರಿ ಹೊಂದುವ ಸಂಬಂಧಿಪದವನ್ನು ಬರೆಯಿರಿ** **4x1=4**

7. ತಾಲ್ಲೂಕು : ಉರ್ದು :: ಕಾರ್ಖಾನೆ : ____________
8. ಅರ್ತಿ : ಪ್ರೀತಿ :: ಧೃತಿ : ____________
9. ದೀರಶೂರ : ಜೋಡಿನುಡಿ :: ಮೆಲ್ಲಮಲ್ಲನೆ : ____________
10. ಇನತನೂಜ : ಬಹುವ್ರೀಹಿಸಮಾಸ :: ನಡುರಾತ್ರಿ : ____________

**III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **7x1=7**

11. ರಾಹಿಲನು ಯಾರು ?
12. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
13. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?
14. ಕವಿ ಕುವೆಂಪುರವರಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
15. ಮನೆಮಂಚಮ್ಮ ಯಾರು?
16. ದೇವನೂರರ ನನ್ನ ದೇವರು ಯಾರೆಂಬುದನ್ನು ತಿಳಿಸಿ ?
17. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ?

VI. **ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕುವಾಕ್ಯದಲ್ಲಿ ಉತ್ತರಿಸಿ** **7x1=7**

18. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು ?
19. ಹೊಸಗಾಲದ ಹಸು ಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?
20. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು ತಿಳಿಸಿ ?
21. ವಿವೇಕಾನಂದರು ಚಿಕಾಗೋ ಸರ್ವ ಧರ್ಮ ಸಮ್ಮೇಳನದಲ್ಲಿ ಏನು ಹೇಳಿದರು ?
22. ದುರ್ಯೋಧನು ತಾನು ಹೊರಡುತ್ತಿರುವುದು ನೆಲಕಲ್ಲ ಛಲಕ್ಕೆ ಎಂದು ಭೀಷ್ಮನಿಗೆ ಹೇಗೆ ವಿವರಿಸುತ್ತಾನೆ?
23. ಹುಲಿಯು ಶಾನುಭೊಗರನ್ನು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?
24. ವಸಂತ ಯಾರಿಗೆ ಮುಖತೊರಲಿಲ್ಲವೆಂದು ವಿಜಯಶ್ರೀ ಸಬರದ ಅವರು ವಿವರಿಸಿದ್ದಾರೆ ?
25. ಧರ್ಮ ಬುದ್ದಿಗೆ ದುಷ್ಟ ಬುದ್ದಿಯು ಯಾವ ಸಲಹೆ ಇತ್ತನು ?
26. ಭಗತ್ ಸಿಂಗ್ ಹೇಗೆ ಅಮರನಾದನು ?
27. ಹೊಲದಲ್ಲಿ ಹುಟ್ಟಿದ ಉತ್ತಾರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ.

V. **ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ** **2x3=6**

28. ಪು. ತಿ. ನ
29. ರನ್ನ,

VI. **ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ** **1x3=3**

30. ಕಾದದಿರೆನಜ್ಜ ಪಾಂಡವ
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ

VII. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣದೊಂದಿಗೆ ಸಮನ್ವಯಗೊಳಿಸಿರಿ** **1x3=3**

31. ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ

VIII. **ಈ ಕೆಳಗಿನ ಗಾದೆಗಳಲ್ಲಿ ಯಾವುದಾದರು ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** **1x3=3**

32. ತಾಳಿದವನು ಬಾಳಿಯಾನು
ಅಥವಾ
ಮನಸ್ಸಿದ್ದರೆ ಮಾರ್ಗ.

IX. **ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ವಿವರಿಸಿ** **6x3=18**

33. "ನಾಚುತಹೇನೀ ಪೂಜೇಯೀ ನಲುಮೆಯಿಂದ"
34. "ಸಾರ್ವಭೌಮರಾ ನೇತ್ತಿಯ ಕುಕ್ಕಿ"
35. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು"
36. "ಜೀವ ಸತ್ತು ಹೋಗುವುದು ಗೊತ್ತ"
37. "ಹಸಿಯದ ಬೇಹಾರಿಯೇ ಇಲ್ಲ"
38. "ಬೇರೆ ಬಣ್ಣವನೆ ಕಾಣೆ'

X. **ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣ ಮಾಡಿರಿ** **1x4=4**

39. ಕಲುಷಿತವಾದೀ ____________________

____________________________

____________________________

____________________ಮುಟ್ವೋಣ.

ಅಥವಾ

ಮತಗಳೆಲ್ಲವೂ ____________________

____________________________

____________________________

____________________ ಬಿತ್ತೋಣ.

XI. **ಈ ಕೆಳಗಿನ ಪದ್ಯ ಭಾಗವನ್ನು ಓದಿ ಅಥವಾ ಅರ್ಥ ಮಾಡಿಕೊಂಡು ಅದರಲ್ಲಿ ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ** **1x4=4**

40. ಮರುಳ ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರತದೊಳೆರ್ದೆನು ಕೌರವೇಂದ್ರನ ಕೊಂದೆ ನೀನೆಂದ.

XII. **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **2x4=8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಅಥವಾ

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವಾದ ಅಂಶಗಳನ್ನು ವಿವರಿಸಿ

ಅಥವಾ

ಲವನ ಧೈರ್ಯ ಮತ್ತು ಸಾಹಸ ವೀರಲವ ಪದ್ಯದಲ್ಲಿ ಹೇಗೆ ಮೂಡಿ ಬಂದಿದೆ.

**XIII. ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೇಗಳಿಗೆ ಉತ್ತರ ಬರೆಯಿರಿ** **1x4=4**

43. ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ, ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯಾವಹಾರಿಕ ಎಂದರೆ ಜೀವನದ ಭಾಷೆ. ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆಗೆ ಕನ್ನಡ, ತುಳು, ಕೊಂಕಣಿ, ತೆಲುಗು, ತಮಿಳು, ಉರ್ದು ಇತ್ಯಾದಿ. ಎಲ್ಲಾ ಗ್ರಾಂಥಿಕ ಭಾಷೆಗಳೂ ವ್ಯಾವಹಾರಿಕ ಭಾಷೆಯಾಗಬೇಕಿಲ್ಲ. ಹಾಗೇಯೆ ಎಲ್ಲಾ ವ್ಯಾವಹಾರಿಕ ಭಾಷೆಗಳೂ ಗ್ರಾಂಥಿಕವಾಗಬೇಕಿಲ್ಲ ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಅದರೆ ಗ್ರಾಂಥಿಕಭಾಷೆಯಲ್ಲ. ಗ್ರೀಕ್ ಗ್ರಾಂಥಿಕ ಭಾಷೆಯಾಗಿದೆ, ಅದರೆ ಯಾವ ಪ್ರದೇಶದಲ್ಲಿಯೂ ವ್ಯವಹಾರಿಕವಾಗಿಲ್ಲ ನವ ಶಿಲಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಾಜಿಸಿ ಒಂದೆಡೆ ಬೀಡುಬಿಟ್ಟು ಆಸ್ತಿ, ಮನೆ, ಬದುಕು, ಮೊದಲಾದ ಬಾವನೆಯನ್ನು ಹೊಂದಲು ಪ್ರಾರಂಭಿಸಿದಾಗಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೆ ಇದ್ದರೂ ತಾನು ಕೆಲಸಕ್ಕೆ ಹೊದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ ಕೊನೆಯಲ್ಲಿ ಲೆಕ್ಕ ಹಾಕಿ ಸಂಬಳ ಪಡೆಯುತ್ತಾನೆ. ಇದನ್ನು ಲಿಪಿಯ ಉಗಮದ ಕಾಲ ಎನ್ನುವರು.

<u>ಪ್ರಶ್ನೇಗಳು</u>

1. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಗಳಿಗಿರುವ ವ್ಯಾತ್ಯಾಸವೇನು?
2. ಲಿಪಿಯ ಉಗಮ ಹೇಗಾಯಿತು?

**XIV. ಈ ಕೆಳಗಿನ ಯಾವುದಾದರು ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ** **1x5=5**

44. ನಿಮ್ಮನ್ನು ಶಿವಮೊಗ್ಗ ಜಿಲ್ಲೆಯ ಭೀಮಾಪುರದ ಸರ್ಕಾರಿ ಪ್ರೌಢಶಾಲೆಯ ಪುನೀತ ಎಂದು ಭಾವಿಸಿಕೊಂಡು ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿಜಯ ಎಂದು ಬಾವಿಸಿಕೊಂಡು ನಿನ್ನ ವಾರ್ಷಿಕ ಪರಿಕ್ಷೆಯ ಸಿದ್ದತೆಯನ್ನು ಕುರಿತು ಬೆಂಗಳೂರಿನ ಜಯನಗರದಲ್ಲಿ ವಾಸವಾಗಿರುವ ವೇದಾವತಿ ಎಂಬ ಹೆಸರಿನ ನಿಮ್ಮ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ.

**XV. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರು ಒಂದಕ್ಕೆ ಹತ್ತು – ಹದಿನೈದು ವಾಕ್ಯಗಳಲ್ಲಿ ಪ್ರಬಂಧ ಬರೆಯಿರಿ** **1x5=5**

45. ಗ್ರಂಥಾಲಯಗಳ ಮಹತ್ವ

ಅಥವಾ

ಮಹಾಮಾರಿ ಕೊರೊನಾ (ಕೋವಿಡ್–19) ಹಾವಳಿ.

## ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ, ಕೋಲಾರ ಜಿಲ್ಲೆ.

## ಮಾದರಿ ಪ್ರಶ್ನೆಪತ್ರಿಕೆ –02

**ವಿಷಯ : ಪ್ರಥಮ ಭಾಷೆ ಕನ್ನಡ** **ಅಂಕಗಳು:–100**

**ತರಗತಿ : 10ನೇ ತರಗತಿ** **ಸಮಯ:–3.15**

1. **ಕೆಳಗಿನ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಸರಿಯಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1=6**

1. ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರ ಗಳ ಸಂಖ್ಯೆ
   ಎ) 6 ಬಿ) 7 ಸಿ) 10 ಡಿ) 25
2. ಉತ್ತಮ ಪುರುಷ ಸರ್ವನಾಮಕ್ಕೆ ಉದಾಹರಣೆ ಪದವಿದು
   ಎ) ತಾವು, ತಾನು ಬಿ) ಅವನು ಇವನು ಸಿ) ನಾನು ನಾವು ಡಿ) ಯಾರು ಏನು
3. ಸಪ್ತಮಿ ವಿಭಕ್ತಿ ಕಾರಕಾರ್ಥ ವಿದು
   ಎ) ಸಂಪ್ರದಾನಕಾರಕ ಬಿ) ಅಪಾದಾನಕಾರಕ ಸಿ) ಅಧಿಕರಣಕಾರಕ ಡಿ) ಕರ್ಮಕಾರಕ
4. ಕೆಳಗಿನವುಗಳಲ್ಲಿ ಅಕರ್ಮಕ ಧಾತು
   ಎ) ಕೊಡು ಬಿ) ತಿನ್ನು ಸಿ) ಉಣ್ಣು ಡಿ) ಮಲಗು
5. ಅಜಮಾಯಿಸಿ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ
   ಎ) ಇಂಗ್ಲಿಷ್ ಬಿ) ಗ್ರೀಕ್ ಸಿ) ಉರ್ದು ಡಿ) ಪಾರ್ಸಿ
6. ಕೆಳಗಿನವುಗಳಲ್ಲಿ ತದ್ಧಿತಾಂತ ನಾಮಪದಕ್ಕೆ ಉದಾಹರಣೆ
   ಎ) ಚೆಲುವಿಕೆ ಬಿ) ಕನ್ನಡತಿ ಸಿ) ಚಂದ್ರನಂತೆ ಡಿ) ಜಾಣತನ

2. **ಕೆಳಗಿನವುಗಳಲ್ಲಿ ಮೊದಲೆರಡು ಪದಗಳು ಸಂಬಂಧದಂತೆ ಮೂರನೇ ಪದದ ಸಂಬಂಧ ಪದ ಬರೆಯಿರಿ.** **4 x 1=4**

7. ಅಗಸಿ : ಹೆಬ್ಬಾಗಿಲು : : ಮಸಲತ್ತು : ---------
8. ಪ್ರಸಾದ : ಹಸಾದ : : ಬಂಜೆ : ---------
9. ಕೆನೆಮೊಸರು : ಜೋಡಿನುಡಿ : : ನಮೋ ನಮೋ : ----------
10. ಮ್ಯಾಗ : ಮೇಲೆ : : ಇಸವಾಸ : ----------

3. **ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** **7 x 1=7**

11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
12. ವಚನಕಾರರಿಗೆ ಯಾವುದು ದೇವರಾಗಿತ್ತು?
13. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
14. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?
15. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
16. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
17. ವಿವೇಕಾನಂದರು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ?

4. **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 x 2=20**

18. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
19. ನೆಹರು ಅವರು ಸರ್ ಎಂ ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?

20. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?

21. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?

22. ಯುದ್ಧದ ವಿಚಾರದಲ್ಲಿ ಕರ್ಣನ  ತೀರ್ಮಾನವೇನು?

23. ಕವಿ ಕುವೆಂಪು ರವರಿಗೆ ಯಾವ ಯಾವುದರಲ್ಲಿ ಆಗಸದಿಂದ ಬಿಸಿಲ ವರೆಗೂ ಹಸುರು ಕಾಣುತ್ತಿದೆ?

24. ಸ್ವಾಮಿ ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ?

25. ಯಾರು ಯಾರಿಗೆ ವಸಂತ ಮುಖ ತೋರಲಿಲ್ಲ?

26. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣಿ ಏನು?

27. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?

**5. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ , ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 3 x 2=6**

28. ಸಾರಾ ಅಬೂಬಕರ್

29. ಲಕ್ಷ್ಮೀಶ

**6. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ , ಗಣ ವಿಭಾಗಿಸಿ , ಛಂದಸ್ಸಿನ ಹೆಸರು ಬರೆಯಿರಿ.. 1 x 3=3**

30. ಏನು ಹೇಳ್ವೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿ ಕೊಂಬುದು ಸೇರದೇ ನಿನಗೆ

**7. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿ. 1 x 3=3**

31. ಆತನು  ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು; ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**8. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3=3**

32. ಕೂಡಿ ಬಾಳಿದರೆ ಸ್ವರ್ಗ ಸುಖ

ಅಥವಾ

ಮಾತೆ ಮುತ್ತು ಮಾತೆ ಮೃತ್ಯು

**9. ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ. 6 x 3=18**

33. ‘ ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ ”

34. “ ಯಾವ ಜೀವಿಯು ತನ್ನಷ್ಟಕ್ಕೆ ತಾನಿಲ್ಲ ”

35. “ ಪೊನ್ನನೆಲ್ಲಮಂ  ನೀನೇ ಕೊಂಡೆ ”

36. “ ಹೊಡೆದರು ಗುಂಡ ಕರುಣೆ ಇಲ್ಲದಂಗ ”

37. “ ನಿನ್ನಪದೆಸೆಯ ಬಯಸುವನಲ್ಲ ”

38. “ ಬೇರೆ ಬಣ್ಣವನ್ನೇ ಕಾಣೆ ”

**10. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ.** **1 x 4=4**

39. ನೀಲ ಮೇಘ ಮಂಡಲ ----------- ಯುಗ-ಯುಗಗಳ -----------------
--------------------------- ಅಥವಾ ------------------------------
--------------------------- ------------------------------
--------------------------- ------------------------------
ಹಕ್ಕಿಹಾರುತಿದೆ ನೋಡಿದಿರಾ ಹಕ್ಕಿಹಾರುತಿದೆ ನೋಡಿದಿರಾ?

**11. ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **1 x 4=4**

40. ನಿಮಗೆ ಪೊಡೆಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ
ಸಮಕೊಳಿಸಲೆಂದು ಬಂದೆನೆ
ಸಮರದೊಳೆನಗಜ್ಜ ಪೇಳೆಮಾವುದು ಕಜ್ಜಂ

**12. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 x 4=8**

41. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಅಥವಾ

ಶಬರಿಯ ಸಡಗರ , ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂದು ಜಿ.ಎಸ್ ಶಿವರುದ್ರಪ್ಪ ರವರ ಆಶಯ. ?

ಅಥವಾ

ಸಂಕಲ್ಪ ಮತ್ತು ಅನುಷ್ಠಾನ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**13. ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **2 x 2=4**

ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ ,ಕರ್ನಾಟಕ ಬಿಟ್ಟು ಭಾರತವಿಲ್ಲ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶೀ ವಸ್ತುಗಲ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಆನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ ವಿದೇಶಿ ವಸ್ತುಗಳ ಬಹಿಷ್ಕಾರ .ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಯಲ್ಲಿ ಧುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ ಅವರಿಗೆ ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ,ಸ್ವದೇಶ ಸಂಸ್ಕೃತಿಯನ್ನುಮರೆಸುತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳುವಳಿ 'ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು.ವಂಕಟರಾಯರು ಈ ಚಳುವಳಿಯಲ್ಲಿಯೂ ಧುಮುಕಿ ಧಾರವಾಡದಲ್ಲಿ ' ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

ಪ್ರಶ್ನೆಗಳು ; 1. ಆಲೂರು ವೆಂಕಟರಾಯರು ಸ್ವದೇಶೀ ಚಳುವಳಿ ಮೂಲಕ ಹೇಗೆ ಮಾದರಿ ಎನಿಸಿದರು ?

2. ಆಲೂರು ವಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು?

**14. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5=5**

44. ನಿಮ್ಮನ್ನು ಮದರ್ ತೆರೇಸಾ ಪ್ರೌಢ ಶಾಲೆ, ಬೆಂಗಳೂರಿನ ' ಸಮರ್ಥ ' ಎಂದು ಭಾವಿಸುತ್ತಾ ನಿಮ್ಮ ಶಾಲೆಯಲ್ಲಿ ನಡೆಯುವ ' ವಿಜ್ಞಾನ ವಸ್ತು ಪ್ರದರ್ಶನಕ್ಕೆ' ಆಹ್ವಾನಿಸುತ್ತ ಧಾರವಾಡದಲ್ಲಿರುವ ' ಕಮಲ ' ಳಿಗೆ ಪತ್ರ ಬರೆಯಿರಿ.

ಅಥವಾ

ನೀವು ನೆಹರು ಬಡಾವಣೆ, ಕೋಲಾರದಲ್ಲಿ ವಾಸವಾಗಿರುವ ' ಪಾರ್ವತಿ ' ಎಂದು ಭಾವಿಸುತ್ತಾ ನಿಮ್ಮ ಬಡಾವಣೆಯಲ್ಲಿ ಉಂಟಾಗಿರುವ ಕುಡಿಯುವ ನೀರಿನ ಅಭಾವವನ್ನು ಪರಿಹರಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ.

**15. ಈ ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳು ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1 x 5=5**

45. ಆನ್ ಲೈನ್ ಶಿಕ್ಷಣದ ಅನುಕೂಲಗಳು ಮತ್ತು ಅನಾನುಕೂಲಗಳು

ಅಥವಾ

ರಾಷ್ಟ್ರೀಯ ಹಬ್ಬಗಳ ಮಹತ್ವ

## ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ, ಕೋಲಾರ ಜಿಲ್ಲೆ.

## ಮಾದರಿ ಪ್ರಶ್ನೆಪತ್ರಿಕೆ –03

**ವಿಷಯ : ಪ್ರಥಮ ಭಾಷೆ ಕನ್ನಡ**

**ತರಗತಿ : 10ನೇ ತರಗತಿ** **ಅಂಕಗಳು:–100**

**ಸಮಯ:–3.15**

**1. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **1x6=6**

1. ' ಕಳುವ್ಯಾರೆ ' ಪದದ ಗ್ರಾಂಥಿಕ ರೂಪವಿದು.
   ಎ) ಕಳುಹಿಸಿದ್ದಾರೆ ಬಿ) ಕಳುಹಿಸುತ್ತಾರೆ ಸಿ) ಕಳುಹಿಸುವರು ಡಿ) ಕಳುಹಿಸುವುದು
2. ಸಪ್ತಮಿ ವಿಭಕ್ತಿಯ ಕಾರಕಾರ್ಥವಿದು :
   ಎ) ಕರ್ಮಾರ್ಥ ಬಿ) ಸಂಪ್ರದಾನಾರ್ಥ ಸಿ) ಅಧಿಕರಣಾರ್ಥ ಡಿ) ಕರಣಾರ್ಥ
3. 'ದಡ ದಡ' ಪದ ಈ ಅವ್ಯಯಕ್ಕೆ ಉದಾಹರಣೆಯಾಗಿದೆ.
   ಎ) ಸಾಮಾನ್ಯಾವ್ಯಯ ಬಿ) ಭಾವಸೂಚಕಾವ್ಯಯ ಸಿ) ಕ್ರಿಯಾರ್ಥಕಾವ್ಯಯ ಡಿ) ಅನುಕರುಣಾವ್ಯಯ
4. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಲೇಖನಚಿಹ್ನೆಯನ್ನು ಬಳಸಲಾಗುತ್ತದೆ : ..............................
   ಎ) ಅಲ್ಪವಿರಾಮ ಬಿ) ಆವರಣ ಸಿ) ಉದ್ಧರಣ ಡಿ) ಪೂರ್ಣವಿರಾಮ
5. ಜಸ್ತ್ವಸಂಧಿಗೆ ಉದಾಹರಣೆಯಾದ ಪದವಿದು ..............................
   ಎ) ಅತ್ಯವಸರ ಬಿ) ಮೈದೋರು ಸಿ) ದಿಗಂತ ಡಿ) ಬೆಂಬತ್ತು
6. 'ಹಿಂದಲೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ ..........................
   ಎ) ಕರ್ಮಧಾರೆಯ ಸಮಾಸ ಬಿ) ತತ್ಪುರುಷ ಸಮಾಸ ಸಿ) ಅಂಶಿ ಸಮಾಸ ಡಿ) ಕ್ರಿಯಾ ಸಮಾಸ

**2. ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :–** **1x4=4**

7. ವೈಶಾಖ : ಬೇಸುಗೆ :: ಕುಠಾರ : ....................
8. ಮಹಾ ಪ್ರಾಣ ವ್ಯಂಜನಗಳು : ಹತ್ತು :: ಅನುನಾಸಿಕಗಳು : ....................
9. ಕೈಯಾನು : ಕೈಚಾಚು :: ಕೈವಾರ : ....................
10. ಮಾಡಲಿ : ವಿಧ್ಯರ್ಥಕ :: ಮಾಡದು : ....................

**3. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :–** **1x7=7**

11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?
12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣ ಬದ್ಧರಾದರು ?
13. ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಯಾರು ?
14. ಹುಲಿಗೆ ಪರಮಾನಂದವಾಗಲು ಕಾರಣವೇನು ?
15. ನದೀ ಜಲಗಳು ಏನಾಗಿವೆ ?
16. ಹಲಗಲಿಯ ನಾಲ್ವರು ಪ್ರಮುಖರು ಯಾರು ?
17. ಯಾರಿಗೆ ವಸಂತ ಮುಖ ತೋರಲಿಲ್ಲ ?

**4. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ :–** **10x2=20**

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
19. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?

20. ದುಷ್ಟ ಬುದ್ಧಿಗೆ ಧರ್ಮಬುದ್ಧಿಯು ಯಾವ ಸಲಹೆಯಿತ್ತನು ?
21. ಹಡುಗನ್ನು ಯಾವುದರ ಬೆಳಕಿನಲ್ಲಿ ಮುನ್ನಡಸಬೇಕಿದೆ ?
22. ಹಲಗಲಿ ಬೇಡರು ದಂಗೆ ಏಳಲು ಕಾರಣವೇನು ?
23. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?
24. ವಿವೇಕಾನಂದರು ಮನುಷ್ಯತ್ವದ ಮಹಿಮೆಯನ್ನು ಕುರಿತು ಏನೆಂದು ಘೋಷಿಸಿದ್ದಾರೆ ?
25. ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.
26. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು ?
27. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

**5. ಕೆಳಗಿನ ಕವಿಗಳ / ಕಾಲ, ಕೃತಿ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :– 2x3=6**

28. ದೇವನೂರು ಮಹಾದೇವ
29. ಕುಮಾರವ್ಯಾಸ

**6. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :– 1x3=3**

30. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ।
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ ।
ಪೊತ್ತುಮಾಕೈವುನೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ॥

**7. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ :– 1x3=3**

31. " ಮಾರಿಗೌತಣವಾಯ್ತು ನಾಳಿನ ಭಾರತವು "

**8. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :– 1x3=3**

32. ಕಟ್ಟುವುದು ಕಠಿಣ, ಕೆಡುಸುವುದು ಸುಲಭ.
ಅಥವಾ
ಹೆತ್ತ ತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.

**9. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ :– 3x6=18**

33. "ತಾಯಿ ದಾರಿಗರಿಗೆ ಬೀಡಲ್ಲಿ ದೊರೆಯುವುದೇ"
34. "ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು"
35. "ಪ್ರಕೃತಿ ವಿಕೃತಿಯೊಂದಿಗೆ ಮನುಷ್ಯನಾಯುಷ್ಯಂ ಕುಂದುಗುಂ"
36. "ಹೊಸ ಎಚ್ಚರದೊಳು ಬದುಕೋಣ"
37. "ಸಮರದೊಳಗೆನಜ್ಜ ಪೇಳಿಮಾವುದು ಕಜ್ಜಂ"
38. "ಅರಸುಗಳ ವಾಜಿಯಂ ಬಿಡು"

**10. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :– 1x4=4**

39. ಹಸುರಾಗಸ ..........................................
..............................................................
..............................................................
................................................ ಬಿಸಿಲು.

ಅಥವಾ

ಹೊಸ ಹೂವಿನ .......................................
..............................................................
..............................................................
..............................................ಯುಸಿಗೂ।

**11. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. ಬಲ್ಗಯ್ಯ ನೃಪರಂಜಿ ತಡೆಯದೆ ರಘುನಿದ್ವಹನ । **1x4=4**
ಸೋಲ್ಗೇಳಿ ನಮಿಸಲಿಳೆಯೊಳ್ ಚರಿಸುತದ್ವರದ ।
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೋಳು ॥

**12. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :– 2x4=8**

41. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು ?

ಅಥವಾ

ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

42. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು ?

ಅಥವಾ

ಕಾಲ ಪಕ್ಷಿಯ ವೇಗವನ್ನು ದ॥ ರಾ॥ ಬೇಂದ್ರೆಯವರು ಹಕ್ಕಿ ಹಾರುತ್ತಿದೆ ನೋಡಿದಿರಾ ಪದ್ಯದಲ್ಲಿ ಹೇಗೆ ವರ್ಣಿಸಿದ್ದಾರೆ ?

**13. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :–**

43. ಅಂದು ಮಹಾರಾಜ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂಬ ತೃಪ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಅವರಲ್ಲಿ ಜ್ಞಾನ ಸಂಪತ್ತಿನ ಜೊತೆಗೆ ನೈತಿಕ ಸಂಪತ್ತು ಇತ್ತು. ಮಹಾರಾಜ ಕಾಲೇಜಿನಲ್ಲಿಯೂ ಮಂಜಪ್ಪನವರಿಗೆ ವಿದ್ಯಾರ್ಥಿವೇತನ ಲಭ್ಯವಾಗಿತ್ತು. ವಿದ್ಯಾರ್ಥಿವೇತನದಿಂದಲೆ ಅವರು ಜೀವನ ನಿರ್ವಹಿಸುತ್ತಿದ್ದರು. ಕಡಿದಾಳ್ ಮಂಜಪ್ಪನವರು ಕಾಲೇಜಿನಲ್ಲಿ ಬಿಡುವಿದ್ದಾಗ ವಾಚನಾಲಯದಲ್ಲಿದ್ದ ದಿನ ಪತ್ರಿಕೆಗಳನ್ನು ತಪ್ಪದೇ ಓದುತ್ತಿದ್ದರು. ಮಹಾತ್ಮ ಗಾಂಧಿಜೀಯಂತಹ ರಾಷ್ಟ್ರ ಭಕ್ತರ ಭಾಷಣಗಳು, ಲೇಖನಗಳು ಅವರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನು ಉಂಟು ಮಾಡಿದ್ದವು. ಹೇಗಲ್, ಕ್ಯಾಂಟೆ, ವಾಲ್ಟೇರ್, ರೂಸೋ ಮುಂತಾದ ದಾರ್ಶನಿಕರ ಕೃತಿಗಳನ್ನು ಗ್ರೀಕ್ ಮಹಾ ಕವಿ ಹೋಮರನ ಇಲಿಯಡ್ ಮತ್ತು ಒಡಿಸ್ಸಿ ಮಹಾ ಕಾವ್ಯಗಳನ್ನು ಗಿಬ್ಬನ್ ಅವರ ಉನ್ನತಿ ಮತ್ತು ಅವನತಿ ಗ್ರಂಥವನ್ನು ರವೀಂದ್ರನಾಥ ಠಾಕೋರ್, ಬರ್ನಾಡ್‌ಷಾ, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳನ್ನು ಓದಿರುವುದರಿಂದ ಮಂಜಪ್ಪನವರ ಮನಸ್ಸು ಬಹಳ ವಿಕಾಸಗೊಂಡಿತ್ತು. ಅಂದು ಜ್ಞಾನ ಸಂಪಾದನೆ ವಿದ್ಯಾರ್ಥಿಗಳ ಮುಖ್ಯ ಗುರಿಯಾಗಿದ್ದರೆ ; ಇಂದು ಪರೀಕ್ಷೆಯಲ್ಲಿ ಹೇಗಾದರೂ ಮಾಡಿ ಉತ್ತೀರ್ಣರಾಗುವುದು ಗುರಿಯಾಗಿದೆ.

**ಪ್ರಶ್ನೆಗಳು :– 2x2=4**

1) ಅಂದು ಮಹಾರಾಜ ಕಾಲೇಜಿನ ಅಧ್ಯಾಪಕರು ಹೇಗೆ ಕಾರ್ಯನಿರ್ವಹಿಸುತ್ತಿದ್ದರು ?

2) ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳುಯಾವುವು ?

**14. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :– 1x5=5**

44. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಕಾರಮಂಗಲ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ ಇಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರೀ ಹರಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಜರುಗಿದ್ದ ಶಾಲಾ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಕೋರಿ ಬೆಂಗಳೂರಿನ ಪ್ರಜಾವಾಣಿ ದಿನ ಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರಿಯಿರಿ.

ಅಥವಾ

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಹನುಮನಹಳ್ಳಿಯ 'ಸಹನ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆಯಲಿರುವ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಆಹ್ವಾನಿಸಿ ಬೆಂಗಳೂರಿನ ಸರಸ್ವತೀಪುರಂನಲ್ಲಿ ವಾಸಿಸುತ್ತಿರುವ 'ಸಂಜನ' ಎಂಬ ಗೆಳತಿಗೆ ಪತ್ರವನ್ನು ಬರೆಯಿರಿ.

**15. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

45. ಸಾಮಾಜಿಕ ಪಿಡುಗುಗಳು **1x5=5**

ಅಥವಾ

ರಾಷ್ಟ್ರೀಯ ಭಾವೈಕ್ಯತೆ.

**ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ, ಕೋಲಾರ ಜಿಲ್ಲೆ.**

**ಮಾದರಿ ಪ್ರಶ್ನೆಪತ್ರಿಕೆ –04**

**ವಿಷಯ : ಪ್ರಥಮ ಭಾಷೆ ಕನ್ನಡ** **ಅಂಕಗಳು:–100**

**ತರಗತಿ : 10ನೇ ತರಗತಿ** **ಸಮಯ:–3.15**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ :** **6x1= 6**

1) ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ.
   ಎ) 02. ಬಿ) 05. ಸಿ) 10 ಡಿ) 13.
2) 'ಅರಮನೆ' ಈ ಸಮಾಸಕ್ಕೆ ಯಉದಾಹರಣೆಯಾಗಿದೆ.
   ಎ) ತತ್ಪುರುಷ. ಬಿ) ಕರ್ಮಧಾರೆಯ. ಸಿ) ಕ್ರಿಯಾ. ಡಿ) ದ್ವಂದ್ವ
3) ಮೊಟ್ಟಮೊದಲು ಈ ವ್ಯಾಕರಣಾಂಶಕ್ಕೆ ಸೇರಿದೆ
   ಎ) ಜೋಡುನುಡಿ. ಬಿ) ದ್ವಿರುಕ್ತಿ. ಸಿ) ವಿರುದ್ಧಾರ್ಥಕ ಡಿ) ಅನುಕರಣಾವ್ಯಯ
4) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.
   ಎ) ಅಲ್ಪವಿರಾಮ. ಬಿ) ಪೂರ್ಣವಿರಾಮ ಸಿ) ಅರ್ಧವಿರಾಮ. ಡಿ) ಆವರಣ
5) 'ರಸ್ತೆ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   ಎ) ಹಿಂದೂಸ್ಥಾನಿ. ಬಿ) ಪೋರ್ಚುಗೀಸ್. ಸಿ) ಅರಬ್ಬೀ. ಡಿ)ಫಾರ್ಸಿ
6) ತೃತೀಯಾ ವಿಭಕ್ತಿಯ ಕಾರಕಾರ್ಥ
   ಎ) ಕರ್ತಾರ್ಥ ಬಿ) ಕರಣಾರ್ಥ ಸಿ) ಅಪಾದಾನ ಡಿ)ಸಂಪ್ರದಾನ

**II ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4x1 = 4**

7) ಪರ್ವತ:ರೂಢನಾಮ:: ಶಿಕ್ಷಕ: ––––––––––––
8) ಜಾಣ್ಮೆ:ತದ್ಧಿತಾಂತ ಭಾವನಾಮ: ಅಂಜಿಕೆ: –––––––––––––
9) ಹರಿಕಾರ: ಮಂದಾಳು: ಸುಸಂಗತ: ––––––––––––––
10) ಕೊಡಲಿ:ಕುಠಾರ:: ಹಸಾದ: –––––––––––––––––––––

**III ಈಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. :** **7 x1 = 7**

11) ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ಮಾಡಿದವರು ಯಾರು?
12) ಅಶೋಕಪೈ ಅವರ ವೃತ್ತಿ ಯಾವುದು?.
13) ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?
14) ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
15) ಯಾವುದಕ್ಕೆ ಮಂಗಾರಿನ ಮಳೆಯಾಗಬೇಕು?
16) ಛಲವನ್ನೆ ಮೆರೆಯುವುದಾಗಿ ನಿರ್ಧರಿಸಿದವನು ಯಾರು?
17) ವಿವೇಕಾನಂದರು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 x2 = 20**

18) ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾದವು ?

19) ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?

20) ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?

21) ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ ?

22) ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?

23) ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿರಿ.

24) ವಿವೇಕಾನಂದರು ಕೋಮುವಾದದ ಕಟ್ಟಾವಿರೋಧಿಯಾಗಿದ್ದರು.ಏಕೆ?

25) ಯಾರಿಗೆ ವಸಂತ ಮುಖ ತೋರಲಿಲ್ಲ?

26) ಜಲಿಯನ್ ವಾಲಾಬಾಗ್ನಲ್ಲಿರುವ ಒಕ್ಕಣೆ ಏನು?

27) ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?

**V. ಈ ಕೆಳಗಿನ ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2x3 = 6**

28) ಎ.ಎನ್ . ಮೂರ್ತಿರಾವ್.

29) ದ. ರಾ.ಬೇಂದ್ರೆ.

**VI. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರಹಾಕಿ ಗಣವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 x3 = 3**

30) ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು

**VII. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿರಿ :** 1 x3 = 3

ಅತಿಶಯ ಪದಾರ್ಥ ನಿಕರ
ಪ್ರತೀತಿಯಂ ಪಡೆದ ಪಾದ ವಿನ್ಯಾಸ ಭೂ
ನುತ ಮಾಗದತ್ತಿನಿರ್ದೋ
ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ

**VIII. ಈ ಕೆಳಗಿನ ಗಾದೆಗಳಲ್ಲಿ ಯಾವುಗಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 x3 = 3**

32) ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.
ಅಥವಾ
ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ .

**IX. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 x3 = 18**

33) 'ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿನೀರು ಸಿದ್ದಪಡಿಸಿ'.

34) 'ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ'.

35) 'ಹುಸಿಯದ ಬೇಹಾರಿಯೇ ಇಲ್ಲ'.

36) 'ಬಾಯ್ದಂಬುಲಕೆ ಕ್ಯಯಾನುವರೆ'.

37) 'ಪಾಂಡವರೊಳಿ ದು ಛಲವನೆ ಮೆರೆವೆಂ'.

38) 'ಅರಸುಗಳ ವಾಜಿಯಂ ಬಿಡು'.

**X** **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ :** **1 x 4 = 4**

39) ಕೊಡಲಿ ------------------ ಅಥವಾ ಸಿಕ್ಕದ್ದು--------------------

------------------------ ---------------------------

------------------------ ---------------------------

-------------------ನಾನೆಷ್ಟಾ. ---------------------ಜನಕಾ

**XI** **ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ** **1 x 4 = 4**

40) ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ.

**XII.** **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತುವಾಕ್ಯಗಳಲ್ಲಿ ಉತ್ತರ ಬರೆಯಿರಿ :** **2 x4 = 8**

41) ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ.

ಅಥವಾ

ಬುದ್ಧನ ಕಾರುಣ್ಯವು ದೇವನೂರು ಮಹಾದೇವನವರ ಮನದೊಳಗೆ ಕೂತ ಬಗೆಯನ್ನು ವಿವರಿಸಿರಿ.

42) ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿರಿ.

ಅಥವಾ

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿರಿ

**XIII.** **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** **2 x2 = 4**

ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯವಹಾರಿಕ ಎಂದರೆ ಜೀವದ ಭಾಷೆ ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹಾರಿಸುತ್ತಾರೆ. ಉದಾಹರಣೆಗೆ ಕನ್ನಡ, ತುಳು, ಕೊಂಕಣಿ, ತೆಲುಗು,ತಮಿಳು, ಉರ್ದು ಇತ್ಯಾದಿ, ಎಲ್ಲಾ ಗ್ರಾಂಥಿಕ ಭಾಷೆಗಳೂ ವ್ಯವಹಾರಿಕ ಭಾಷೆಯಾಗಬೇಕಿಲ್ಲ. ಹಾಗೆಯೇ ಎಲ್ಲಾ ವ್ಯವಹಾರಿಕ ಭಾಷೆಗಳೂ ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯವಹಾರಿಕ ಭಾಷೆ. ಆದರೆ ಗ್ರಾಂಥಿಕ ಭಾಷೆಯಲ್ಲ. ಗ್ರೀಕ್ ಗ್ರಾಂಥಿಕ ಭಾಷೆಯಾಗಿದೆ. ಆದರೆ ಯಾವ ಪ್ರದೇಶದಲ್ಲಿಯೂ ವ್ವಹಾರಿಕವಾಗಿಲ್ಲ. ನವ ಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡುಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಾಗಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೆ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು

ಗೆರೆ ಎಳೆದು ಗುರುತಿಸಿ ಕೊನೆಯಲ್ಲಿ ಲೆಕ್ಕ ಹಾಕಿ ಸಂಬಳ ಪಡೆಯುತ್ತಾನೆ. ಇದನ್ನು ಲಿಪಿಯ ಉಗಮದ ಕಾಲ ಎನ್ನುವರು.

43) ಅ) ವ್ಯವಹಾರಿಕ ಮತ್ತು ಗ್ರಾಂಥಿಕಭಾಷೆಗಳಿಗಿರುವ ವ್ಯತ್ಯಾಸವೇನು?

ಆ) ಲಿಪಿಯ ಉಗಮ ಹೇಗಾಯಿತು ?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 x5 = 5**

44) ನಿಮ್ಮನ್ನು ಕೆ.ಜಿ.ಎಫ್ ಸರ್ಕಾರಿ ಪ್ರೌಢಶಾಲೆ ಉರಿಗಾಂಪೇಟೆಯ 10 ನೇತರಗತಿಯಲ್ಲಿ ಓದುತ್ತಿರುವ ಪ್ರೀತಿ/ ಪವನ್ ಎಂದು ಭಾವಿಸಿಕೊಂಡು ಮೈಸೂರಿನಲ್ಲಿರುವ ನಿಮ್ಮ ಅಣ್ಣನಿಗೆ ಶಾಲಾ ವಾರ್ಷಿಕೋತ್ಸವಕ್ಕೆ ಆಗಮಿಸುವಂತೆ ಕೋರಿ ಪತ್ರ ಬರೆಯಿರಿ

ಅಥವಾ

ಪರಿಷತ್ತು ಪ್ರಕಟಿಸಿದ 'ಕನ್ನಡ ನಿಘಂಟಿ'ನ ಹತ್ತು ಪ್ರತಿಗಳನ್ನು ಕಳುಹಿಸಿಕೊಡುವಂತೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಪತ್ರ ವ್ಯವಹಾರ ನಡೆಸಿರಿ .

**XV ಈ ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :**

**1 x5 = 5**

45) ತ್ಯಾಜ್ಯ ವಸ್ತು ನಿರ್ವಹಣೆ

ಅಥವಾ

ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

*********************

## ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ, ಕೋಲಾರ ಜಿಲ್ಲೆ.

## ಮಾದರಿ ಪ್ರಶ್ನೆಪತ್ರಿಕೆ –05

**ವಿಷಯ : ಪ್ರಥಮ ಭಾಷೆ ಕನ್ನಡ** **ಅಂಕಗಳು :– 100**

**ತರಗತಿ : 10ನೇ ತರಗತಿ** **ಸಮಯ :– 3.15**

**1. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** $6 \times 1 = 6$

1. 'ಮರವನ್ನು' ಪದವು ಈ ಸಂಧಿಗೆಉದಾಹರಣೆಯಾಗಿದೆ.
   ಎ) ಲೋಪ ಬಿ) ಆದೇಶ ಸಿ) ಆಗಮ ಡಿ) ಗುಣ
2. ಒಂದು ಪೂರ್ಣಕ್ರಿಯೆಯಿಂದಕೂಡಿದ ವಾಕ್ಯದಕೊನೆಯಲ್ಲಿ ಬಳಸುವ ಲೇಖನ ಚಿಹ್ನೆ.
   ಎ) ಉದ್ಧರಣ ಬಿ) ಪೂರ್ಣವಿರಾಮ ಸಿ) ಅಲ್ಪವಿರಾಮ ಡಿ) ಅರ್ಧವಿರಾಮ
3. 'ಅಂಗೈ' ಪದವನ್ನು ವಿಗ್ರಹಿಸಿದಾಗ ಆಗುವ ಸಮಾಸ.
   ಅ) ಅಂಶಿ ಬಿ) ಗಮಕ ಸಿ) ಕ್ರಿಯಾ ಡಿ) ದ್ವಂದ್ವ
4. ಪ್ರಥಮಾ ವಿಭಕ್ತಿಯಕಾರಕಾರ್ಥ ಪದವಿದು.
   ಅ) ಕರ್ಮಾರ್ಥ ಬಿ) ಕರಣಾರ್ಥ ಸಿ) ಕರ್ತ್ರಾರ್ಥ ಡಿ) ಸಂಬಂಧ
5. 'ಅನಾನಸು' ಪದವುಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   ಅ) ಪೋರ್ಚ್‌ಗೀಸ್ ಬಿ) ಅರಬ್ಬೀ ಸಿ) ಗ್ರೀಕ್ ಡಿ) ಇಂಗ್ಲಿಷ್
6. 'ಸಾಕು' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ.
   ಅ) ಸಾಮಾನ್ಯರ್ಥಕಾವ್ಯಯ ಬಿ) ಕ್ರಿಯಾರ್ಥಕಾವ್ಯಯ
   ಇ) ಅನುಕರಣಾವ್ಯಯ ಈ) ಭಾವಸೂಚಕಾವ್ಯಯ

**2. ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ** $4 \times 1 = 4$

7. ಸ್ವರಗಳು : 13 :: ಯೋಗವಾಹಗಳು : ____________
8. ಸತಿಪತಿ : ಜೋಡುನುಡಿ :: ಬನ್ನಿ ಬನ್ನಿ : ____________
9. ಜಾಣತನ : ತದ್ಧಿತಾಂತ ಬಾವನಾಮ:: ಬಳೆಗಾರ : ____________
10. ತಮಾಲ : ಕತ್ತಲೆ :: ತಸ್ಕರ : ____________

**3. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** $7 \times 1 = 7$

11. ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿಹಿಡಿದುಕೊಂಡಿದ್ದೇನೆ?
12. ವಿಶ್ವೇಶ್ವರಯ್ಯಅವರನ್ನು ದಿವಾನರಾಗಿನೇಮಿಸಿದವರು ಯಾರು?
13. ಮನೆ ಮಂಚಮ್ಮನ ಕಥೆ ಹೇಳಿದ ಕವಿ ಯಾರು?
14. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವಆರೋಪವನ್ನು ಹೊರಿಸಿದನು?
15. ನದೀಜಲಗಳು ಏನಾಗಿವೆ?
16. ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?
17. ವಿವೇಕಾನಂದರನ್ನು 'ಮಾನವತಾಮಿತ್ರ' ರೆಂದು ಕರೆದವರಾರು ?

**4. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** $10 \times 2 = 20$

18. ಶಬರಿಯು ರಾಮ–ಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

19. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
20. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೇನು? ವಿವರಿಸಿ.
21. ಹುಲಿಯು ಹಿಂದಿನಿಂದ ಹಾರಿಕೊಲ್ಲದಿರಲು ಕಾರಣಗಳೇನು?
22. ಕುಂತಿ, ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?
23. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?
24. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?
25. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
26. ಭಗತ್‌ಸಿಂಗ್ ಅಮರನಾಗಲು ಪೂರಕವಾದ ಅಂಶಗಳೇನು?
27. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?

**5. ಕೆಳಗಿನ ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ**

28. ಡಿ. ಎಸ್. ಜಯಪ್ಪಗೌಡ $\mathbf{2 \times 3 = 6}$
29. ಕುವೆಂಪು

**6. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ** $\mathbf{1 \times 3 = 3}$

30. ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ

**7. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಗೊಳಿಸಿ** $\mathbf{1 \times 3 = 3}$

31. "ಭೀಮದುರ್ಯೋಧನರು ಮದಗಜಗಳಂತೆ ಹೋರಾಡಿದರು"

**8. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ**

32. ಕಾಯಕವೇ ಕೈಲಾಸ $\mathbf{1 \times 3 = 3}$

ಅಥವಾ

ಬೆಳೆಯುವ ಸಿರಿ ಮೊಳಕೆಯಲ್ಲಿ

**9. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ** $\mathbf{6 \times 3 = 18}$

33. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"
34. "ಬೆಳಕಿಗೊಲಿದವರ್ ಉರಿವ ಬತ್ತಿಯಕರುಕಕಾಣರು"
35. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು."
36. "ಪ್ರೀತಿಯ ಹಣತೆಯ ಹಚ್ಚೋಣ."
37. "ಮಾರಿಗೌತಣವಾಯ್ತು ನಾಳಿನ ಭಾರತವು."
38. "ನೆಲಕಿರುವೆನೆಂದು ಬಗೆದಿರೆಚಲಕಿರುವೆಂ"

**10. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ** $\mathbf{1 \times 4 = 4}$

39. ಉರ್ವಿಯೊಳ್ ಕೌಸಲ್ಯೆಪಡೆದಕುವರಂರಾಮ

______________________________

______________________________

______________________________

______________________________

ಗುರ್ವತೋಳ್ಗಳಿವೇತಕೆಂದು ಸಲೆವಾಸಿಯಂ ತೊಟ್ಟುಲವನುರಿದೆದ್ದನು.

ಅಥವಾ

ತೆಗೆದುತ್ತರೀಯಮಂ ಮುರಿದುಕುದುರೆಯಗಳಕೆ

______________________________

______________________________

______________________________

______________________________

ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿಜೇಗೈದು ನಿಂತಿರ್ದನು.

**11. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ**

40. ಕರಿನರೆ ಬಣ್ಣದ ಪುಚ್ಛಗಳುಂಟು $\mathbf{1 \times 4 = 4}$

ಬಿಳಿ –ಹೊಳೆ ಬಣ್ಣದಗರಿ–ಗರಿಯುಂಟು
ಕೆನ್ನನ ಹೊನ್ನನ ಬಣ್ಣ–ಬಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟು
ಹಕ್ಕಿಹಾರುತಿದೆ ನೋಡಿದಿರಾ?

**12. ಕೆಳಗಿನ ಪ್ರಶ್ನೆಗಳಿಗೆ ಎಂಟುಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** $\mathbf{2 \times 4 = 8}$

41. ‘ವೃಕ್ಷಸಾಕ್ಷಿ’ ಪಾಠದಲ್ಲಿ ನೀವು ಮೆಚ್ಚುವ ಪಾತ್ರಯಾವುದು? ಏಕೆ?

ಅಥವಾ

ದುಷ್ಟ ಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

42. ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

ಅಥವಾ

ಹಲಗಲಿ ದಂಗೆಯ ಪರಿಣಾಮವೇನು?

13. **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡುಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** $\mathbf{1 \times 4 = 4(2 + 2)}$

ಗುಬ್ಬಚ್ಚಿ ಬಳಗಕ್ಕೆ ಸೇರಿದ ಪ್ರಸಿದ್ಧ ಹಕ್ಕಿ ಗೀಜುಗ.ಕೊಕ್ಕು ಮತ್ತು ಆಕಾರಗಳಲ್ಲಿ ಇದು ಗುಬ್ಬಚ್ಚಿಯನ್ನೇ ಹೋಲುವುದಾದರೂ ಮೈ ಪ್ರಧಾನವಾಗಿ ಹಳದಿ ಬಣ್ಣವೂ, ಕಪ್ಪು ಬಣ್ಣದ ಕಪಾಲವೂ ಇರುವುದರಿಂದ ಇದನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಗೀಜುಗವು ಕುಲಾವಿಯಾಕಾರದ ಆಕರ್ಷಕವಾದ ಗೂಡುಗಳನ್ನು ನೇಯುತ್ತದೆ. ಗೂಡುಕಟ್ಟುವಾಗ, ಸ್ಥಳ ಆಯ್ಕೆ ಮಾಡುವಾಗ ಗೀಜುಗ ಹಕ್ಕಿ ಅಸಾಧಾರಣ ಬುದ್ಧಿವಂತಿಕೆ ತೋರಿಸುತ್ತದೆ. ಗೂಡುಕಟ್ಟಲು ಪ್ರಶಸ್ತವಾದ ಎತ್ತರದ ಮರ ಸಿಗದಿದ್ದಾಗ ಇವು ಗಿಡಗಳ ಕೊಂಬೆಗಳಲ್ಲಿ ಗೂಡು ಕಟ್ಟುತ್ತವೆ. ಆದರೆ ನೆಲ ಮಟ್ಟದಲ್ಲಿ ಹಾಗೆ ಗೂಡುಕಟ್ಟುವಾಗಲೆಲ್ಲ ಗೀಜುಗ ಕೆಳಗಡೆ ಆಳವಾದ ಬಾವಿಯ, ನದಿ ಕೆರೆಗಳ ಕಮರಿಯೋ ಇರುವೆಡೆ ಬಾಗಿರುವ ಕೊಂಬೆಯ ತುದಿಗೆ ಗೂಡು ಕಟ್ಟುತ್ತದೆ. ಕೆಳಗಡೆ ಆಳವಾದ ಪ್ರಪಾತ ಇರುವುದರಿಂದ ಸ್ವಲ್ಪ ಆಯ ತಪ್ಪಿದರು ಕೊಂಬೆ ಸಮೇತ ಪಾತಾಳಕ್ಕೆ ಬೀಳುವ ಭಯದಲ್ಲಿ ಅದು ಗೂಡು ಕಟ್ಟಿರುವ ಬಳುಕುವ ಕೊಂಬೆಯ ಮೇಲೆ ಹೋಗಿ ಮೊಟ್ಟೆಗಳನ್ನಾಗಲೀ ಮರಿಗಳನ್ನಾಗಲೀ ಕದಿಯಲು ಬೆಕ್ಕು ಹಾವು ಮೊದಲಾದ ಯಾವ ಪ್ರಾಣಿಯೂ ಧೈರ್ಯ ಮಾಡುವುದಿಲ್ಲ

**43. ಪ್ರಶ್ನೆಗಳು**

ಅ) ಗೀಜಗಗಳು ಗೂಡು ಕಟ್ಟುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳೇನು?

ಆ) ಗುಬ್ಬಚ್ಚಿಗೂ ಗೀಜುಗನಿಗೂ ಇರುವ ವ್ಯತ್ಯಾಸಗಳೇನು?

**14. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ** $\mathbf{1 \times 5 = 5}$

44. ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ **'ಗೌತಮ್'** ಎಂದು ಭಾವಿಸಿಕೊಂಡು. ನಿಮ್ಮ ಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಪ್ರಜಾವಾಣಿ ದಿನ ಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಕೋಲಾರದ ಸರ್ಕಾರಿ ಪ್ರೌಢಶಾಲೆಯ **'ಚಂದನ್'** ಎಂದು ಭಾವಿಸಿಕೊಂಡು ಮುಳಬಾಗಿಲಿನಲ್ಲಿ ವಾಸವಿರುವ ನಿಮ್ಮ ಚಿಕ್ಕಪ್ಪನವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯ ಬಗ್ಗೆ ಒಂದು ಪತ್ರ ಬರೆಯಿರಿ.

**15. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ**

45 ಮಹಿಳಾ ಸಬಲೀಕರಣ. $\mathbf{1 \times 5 = 5}$

ಅಥವಾ

ರಾಷ್ಟ್ರೀಯ ಹಬ್ಬಗಳ ಮಹತ್ವ.

## ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ, ಕೋಲಾರ ಜಿಲ್ಲೆ.

## ಮಾದರಿ ಪ್ರಶ್ನೆಪತ್ರಿಕೆ –06

**ವಿಷಯ : ಪ್ರಥಮ ಭಾಷೆ ಕನ್ನಡ** **ಅಂಕಗಳು :– 100**

**ತರಗತಿ : 10ನೇ ತರಗತಿ** **ಸಮಯ :– 3.15**

**1. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ:** **6X1=6**

1. ವರ್ಗದ ದ್ವಿತೀಯ ಮತ್ತು ಚತುರ್ಥ ಅಕ್ಷರಗಳಿಗೆ ಹೀಗೆನ್ನುವರು
   ಎ) ಅಲ್ಪಪ್ರಾಣ ಬಿ) ಮಹಾಪ್ರಾಣ ಸಿ) ಅನುನಾಸಿಕ ಡಿ) ಪ್ಲುತ
2. "ವಧೂಪೇತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   ಎ) ಗುಣ ಬಿ) ಲೋಪ ಸಿ) ಸವರ್ಣದೀರ್ಘ ಡಿ) ವೃದ್ಧಿ
3. "ಬಟ್ಟಬಯಲು" ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.
   ಎ) ಜೋಡಿಪದ ಬಿ) ಅನುಕರಣಾವ್ಯಯ ಸಿ) ದ್ವಿರುಕ್ತಿ ಡಿ) ನುಡಿಗಟ್ಟು
4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂತಹ ವಾಕ್ಯವನ್ನು ಹೀಗೆನ್ನುವರು.
   ಎ) ಸಂಯೋಜಿತವಾಕ್ಯ ಬಿ) ಮಿಶ್ರವಾಕ್ಯ ಸಿ) ಸಮಾನ್ಯವಾಕ್ಯ ಡಿ) ಉಪವಾಕ್ಯ
5. 'ರಸೀದಿ' ಈ ಭಾಷೆಯಿಂದ ಬಂದಿದೆ.
   ಎ) ಪೋರ್ಚುಗೀಸ್ ಬಿ) ಅರಬ್ಬೀ ಸಿ) ಗ್ರೀಕ್ ಡಿ) ಉರ್ದು
6. 'ಮೇದಿನಿಪತಿ' ಈ ಸಮಾನಕ್ಕೆ ಉದಾಹರಣೆಯಾಗಿದೆ.
   ಎ) ದ್ವಂದ್ವ ಬಿ) ಕರ್ಮಧಾರೆಯ ಸಿ) ತತ್ಪುರುಷ ಡಿ) ದ್ವಿಗು

**2. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿ ಪದವನ್ನು ಬರೆಯಿರಿ.** **4X1=4**

7. ದ್ಯೂತ : ಜೂಜು :: ವಂದ್ಯಾ:________
8. ಅನೃತ : ಸುಳ್ಳು :: ಕೃತ್ರಿಮ:________
9. ಮಾಡಲಿ: ವಿಧ್ಯರ್ಥಕ ::ಮಾಡನು:________
10. ಬೇಡ : ಕ್ರಿಯಾರ್ಥಕಾವ್ಯಯ :: ಅವನೇ:________

**3. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** 7X1=7

11. ವಚನಕಾರರಿಗೆ ಯಾವುದು ದೇವರಾಗಿತ್ತು ?
12. ಅಶೋಕ ಪೈ ಅವರ ವೃತ್ತಿ ಯಾವುದು ?
13. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?
14. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?
15. ಕಾಡು ಮೇಡುಗಳ ಸ್ಥಿತಿ ಹೇಗಿದೆ ?
16. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು ?
17. ಸರ್ವಧರ್ಮ ಸಮ್ಮೇಳನವು ಎಲ್ಲಿ ನಡೆಯಿತು ?

**4. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 10X2=20

18. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು ?
19. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?
20. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ ?
21. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು ? ವಿವರಿಸಿ.
22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?
23. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?
24. ಸ್ವಾಮಿ ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ ?
25. ಪುಟ್ಟ ಪೋರಿಯ ಪ್ರಶ್ನೆಗಳೇನು ?
26. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು ?
27. ಉಪ್ಪಿನ ವಿಶೇಷತೆ ಒಗಟಿನಲ್ಲಿ ಒಕ್ಕಣೆ ಏನು ?

**5. ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ,ಕಾಲ.ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** 2X3=6

28. ಜಿ.ಎಸ್ ಶಿವರುದ್ರಪ್ಪ
29. ದುರ್ಗಸಿಂಹ

**6. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ.** 1X3=3

30. ಎನೆನಸುನಕ್ಕು ಮಾರರಿಪುವಾತನ ಧೈರ್ಯಮನಾತನೇಳ್ಗೆವೆ

**7. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿನ ಲಕ್ಷಣ ಬರೆದು ಸಮನ್ವಯಗೊಳಿಸಿ.** 1X3=3

31. ಸೀತೆಯ ಮುಖ ಕಮಲದಂತೆ ಅರಳಿತು.

**8. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** 1X3=3

32. "ಕೋಪದಲ್ಲಿ ಕೋಯ್ದ ಮೂಗು ಮತ್ತೆ ಬಂದೀತೆ"
    ಅಥವಾ
    "ಹಣಕ್ಕಿಂತ ಗುಣ ಮೇಲು"

**9. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** 6X3=18

33. "ಯುದ್ದಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"
34. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕಕಾಣರು"
35. "ಸಾಮಾಜಿಕ ಕಾನೂನುಗಳ ಹರಿಕಾರ"
36. "ಹೊಸಗಾಲದ ಹಸು ಮಕ್ಕಳ ಹರಿಸಿ"
37. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"
38. "ಅರಸುಗಳ ವಾಜಿಯಂ ಬಿಡು"

**10. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1X4=4**

39. ನೆಲಕಿವೆನೆಂದು ______________

______________________

______________ ಪುದುವಾಳ್ದಿಪೆನೇ.

ಅಥವಾ

ಪುಟ್ಟಿದ ನೂರ್ವರ ____________

______________________

______________________

__________ ಛಲಮನೆ ಮೆರೆವೆಂ.

**11. ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **1X4=4**

40. ಅದೊ ಹುಲ್ಲಿನ ಮಕಮಲ್ಲಿನ
ಪೊಸಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚಿರೆ
ಬೇರೆ ಬಣ್ಣವನೆ ಕಾಣೆ !

**12. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**

41. ಮೂರ್ತಿರಾಯರ ದೃಷ್ಠಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

ಅಥವಾ

ಶಾನುಭೋಗರನ್ನು ರಕ್ಷಿಸಿಯದು ಖಿರ್ದಿ ಪುಸ್ತಕವೇ? ಹುಲಿಯ ಧರ್ಮವೇ ಸಮರ್ಥನೆಯೊಂದಿಗೆ ವಿವರಿಸಿ.

42. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

ಅಥವಾ

ಕರ್ಣನ ನಿರ್ಧಾರ ಸರಿ ಎನ್ನುವಿರಾ?ಏಕೆ?

**13. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1x4=4 (2+2)**

43. ಪವಾಡ, ಮೂಡನಂಬಿಕೆ, ಮಾಟಮಂತ್ರ ಮುಂತಾದವುಗಳ ಬಗ್ಗೆ ವಿಜ್ಞಾನದ ಸಭೆ, ಸಮ್ಮೇಳನಗಳಲ್ಲಿ ಚರ್ಚಿಸಿಬೇಕು. ಸಮಾಜದ ಮೇಲೆ ಪ್ರಭಾವ ಬೀರುತ್ತಿರುವ ಸಮಸ್ಯೆಗಳಿಂದ ವಿಜ್ಞಾನಿಗಳು ವಿಮುಖರಾಗಿರುವುದು ಸಾಧ್ಯವಿಲ್ಲ. ವಿಜ್ಞಾನಿ ತನ್ನ ಶೋಧನೆಯ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕು. ಸಂಶೋಧನಾ ಕ್ಷೇತ್ರವಾಗಬೇಕು ನಾಲ್ಕು ಗೋಡೆಗಳ ಮಧ್ಯಕ್ಕೆ ಸೀಮಿತವಾಗಿರದೆ ಜನರ ನಿತ್ಯ ಜೀವನದ ಸಮಸ್ಯೆಗಳೂ ಆತನ ಸಂಶೋಧನಾ ಕ್ಷೇತ್ರವಾಗಬೇಕು. ಹಲವಾರು ಅತಾರ್ಕಿಕವಾದ ನಡಾವಳಿಗಳಿಂದ ಸಮಾಜದ ಅನ್ಯಾಯಕ್ಕೆ ಒಳಪಟ್ಟಿದ್ದು ಉಸಿರುಕಟ್ಟುವ ವಾತಾವರಣವಿದೆ. ಅದನ್ನು ಶುದ್ಧಗೊಳಿಸುವಲ್ಲಿ ವಿಜ್ಞಾನಿಗಳು ಇನ್ನೂ ಪ್ರಯತ್ನಿಸದೇ ಇರುವುದು ಸರಿಯಲ್ಲ.

**ಪ್ರಶ್ನೆಗಳು :**

ಅ) ವಿಜ್ಞಾನಿಗಳು ವಿಮುಖರಾಗದೆ ಕೈಗೊಳ್ಳಬೇಕಾದ ಕಾರ್ಯಗಳು ಯಾವುವು?

ಆ) ಸಂಶೋಧನೆಯ ಬಗ್ಗೆ ಲೇಖಕರ ವಿಚಾರವೇನು?

**14. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಬರೆಯಿರಿ 1x5=5**

44. ನಿಮ್ಮನ್ನು ಕೋಲಾರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಕವಿತ ಎಂದು ಭಾವಿಸಿಕೊಂಡು ಬೆಂಗಳೂರಿನ ನೆಹರು ತಾರಾಲಯ ವೀಕ್ಷಣೆಗೆ ಸಮಯಾವಕಾಶ ಕೋರಿ ಅಲ್ಲಿನ ವ್ಯವಸ್ಥಾಪಕರಿಗೆ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

**ನಿಮ್ಮನ್ನು ಹಾವೇರಿಯ** ಸರ್ಕಾರಿ ಪ್ರೌಢಶಾಲೆಯ ವಿನೋಧ್ ಎಂದು ಭಾವಿಸಿಕೊಂಡು ಶಾಲೆಯ;;ಇ ಆಯೋಜಿಸಿರುವ ಪ್ರತಿಭಾ ಪ್ರದರ್ಶನ ಕಾರ್ಯಕ್ರಮಕ್ಕೆ ಅಹ್ವಾನಿಸಿ ಬೆಂಗಳೂರಿನ ಕುವೆಂಪು ನಗರದಲ್ಲಿ ವಾಸವಾಗಿರುವ ಭವ್ಯ ಎಂಬ ಹೆಸರಿನ ತಂಗಿಗೆ ಪತ್ರವನ್ನು ಬರೆಯಿರಿ.

**15. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1x5=5**

45. ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯಗಳ ಮಹತ್ವ

ಅಥವಾ

ಸ್ವಚ್ಛ ಭಾರತ ಅಭಿಯಾನ